ಅಸಲು ದಾವಾ ನಂ. 7/2024 ಡಿಡಬ್ಲೂ : 1

ದಿನಾಂಕಃ 09-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರವಾಗಿಃ ಶ್ರೀ ಎಮ್ ಡಿ ಆರ್ ವಕೀಲರಿಂದಃ**

7. ನಿಡಿ-5 ಮತ್ತು ನಿಡಿ -6 ಗಳನ್ನು ನಾನೇ ಅರ್ಜಿ ಕೊಟ್ಟು ಪಡೆದುಕೊಂಡಿರುತ್ತೇನೆ .. ಸದರಿ ದಾಖಲಾತಿಗಳಲ್ಲಿ ಏನು ಬರೆದಿದ್ದಾರೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ . ಕಾರವಾರ ನ್ಯಾಯಲಾಯದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಂಪೂರ್ಣ ದಾಖಲಾತಿಗಳನ್ನು ಪಡೆಯಲು ತೊಂದರೆ ಇರಲಿಲ್ಲ . ಓ ಎಸ್ ನಂ. 39/2022 ನಲ್ಲಿ ಆಗಿರುವ ಅಂತಿಮ ತೀರ್ಮಾನದ ಬಗ್ಗೆ ನನಗೆ ಗೊತ್ತಿಲ್ಲ . ಆ ಪ್ರಕರಣದಲ್ಲಿ ನಾನು, ಅಕ್ಬರರವರ ಹೆಂಡತಿ ಕೂಡ ಹಾಜರಾಗಿದ್ದೆವು ಎಂದರೆ ಸರಿ . ಆ ಪ್ರಕರಣದಲ್ಲಿಯ ತೀರ್ಮಾನದ ಪ್ರಕಾರ ನಾನು ನನ್ನ ಪಾಲಿನ ಹಣವನ್ನು ಹಾಗೂ ವಾದಿಗಳು ಅವರ ಪಾಲಿನ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಆ ತೀರ್ಮಾನದಲ್ಲಿ ನಮ್ಮ ನಾಲ್ಕು ಜನರನ್ನು ಹೊರತು ಪಡಿಸಿ ಬೇರೆ ಯಾರಿಗೂ ಹಣ ಕೊಡುವ ಬಗ್ಗೆ ತೀರ್ಮಾನ ಆಗಿರಲಿಲ್ಲ ಎಂದರೆ ಸರಿ . ಸಾಕ್ಷಿ ಸ್ವತಃ 5 ಜನರಿಗೆ ಪಾಲಾಗಬೇಕಿತ್ತು ಎಂದು ನುಡಿದಿರುತ್ತಾರೆ. ಆ ಪ್ರಕರಣದಲ್ಲಿ ನಾಲ್ಕು ಪಾಲುಗಳು ಆದಾಗ 2 ನೇ ಪ್ರತಿವಾದಿ ಅಕ್ಬರರವರ ಹೆಂಡತಿ ಆ ತೀರ್ಪಿನ ವಿರುದ್ಧ ಯಾವುದೇ ಮೇಲ್ಮನವಿ ಮಾಡಿಲ್ಲ ಎಂದರೆ ಸರಿ . ನಮ್ಮ ನಾಲ್ಕು ಜನರ ಹೊರತಾಗಿ 2 ನೇ ಪ್ರತಿವಾದಿಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ . ಅದೇ ರೀತಿ ಕಾರವಾರದಲ್ಲಿರುವಂತಹ ಮಹಮ್ಮದ್ ಸಾಬ್ ಆಸ್ತಿಗೆ ನಮ್ಮ ನಾಲ್ಕು ಜನರನ್ನು ಹೊರತು ಪಡಿಸಿ 2 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.